**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

**ಸ್ಪೇಷಲ್ ಕೇಸ್ ನಂ : 132/2017**

**ಚಾ.ಸಾ : 8        ಪ್ರಾ.ಸಾ : 6**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 04.02.2023**

| | | |
|---|---|---|
| ಸಾಕ್ಷಿಯ ಹೆಸರು | : | ಹನುಮಂತರಾವ್ |
| ತಂದೆಯ ಹೆಸರು | : | ತಿಮ್ಮಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪ್ರ.ದ.ಸ ಡಿ.ಡಿ.ಪಿ.ಐ ಕಛೇರಿ ರಾಯಚೂರ |
| ವಿಳಾಸ | : | ರಾಯಚೂರ |

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭೀಯೋಜಕರಿಂದ**

ದಿ.17.08.2015 ರಂದು ನನಗೆ ಲೋಕಾಯುಕ್ತ ಪೋಲಿಸರು ತಮ್ಮ ಕಛೇರಿಗೆ ಕರೆದಿದ್ದರು. ನನ್ನ ಜೊತೆ ಚಾ.ಸಾ-9 ಅವರನ್ನು ಕರೆದಿದ್ದರು. ಅಲ್ಲಿ ಲೋಕಾಯುಕ್ತ ಪೋಲಿಸರು ಸಿ.ಎ.ಜಿ ಆಡಿಟ್ ಮಾಡಿದಾಗ ಬೇರೆ ಬೇರೆ ಗ್ರಾಮ ಪಂಚಾಯತಿಯಲ್ಲಿ ಹಣ ದುರ್ಬಳಕೆ ಆಗಿದೆ ದಿ.18.08.2015 ರಂದು ಹೋಗಬೇಕಾಗಿದೆ ಎಂದು ನನಗೆ ಹೇಳಿದರು. ನಂತರ ನಾನು ಮರುದಿನ ಲೋಕಾಯುಕ್ತ ಪೋಲಿಸ ಕಛೇರಿಗೆ ಬಂದಿರುತ್ತೇನೆ. ಅಲ್ಲಿ ಚಾ.ಸಾ-9, ನರಸಿಂಗ, ಚಾ.ಸಾ-37 ಎಲ್ಲರೂ ಇದ್ದರು. ನಾವೆಲ್ಲರೂ ಗಾಣದಾಳ ಪಂಚಾಯತಿಗೆ ಹೋಗಿರುತ್ತೇವೆ. ಅಲ್ಲಿ ಪಿ.ಡಿ.ಓ ಮಲ್ಲಪ್ಪ (ಆರೋಪಿ ನಂ.3) ಇವರು ಇದ್ದರು, ಅವರನ್ನು ನಮಗೆ ಪರಿಚಯ ಮಾಡಿಕೊಟ್ಟಿರುತ್ತಾರೆ. ನಂತರ ಅಲ್ಲಿ ಆರೋಪಿ ನಂ.3 ಇವರ ಮೂಲಕ ಲೋಕಾಯುಕ್ತ ಪೋಲಿಸರು ನರೇಗಾ ಯೋಜನೆ ಅಡಿಯಲ್ಲಿ ಗಾಣದಾಳ ಪ್ರೌಢ ಶಾಲೆಯ ಮೈದಾನ ನಿರ್ಮಾಣ ದುರಸ್ತಿ ಹಾಗೂ ಜಾಲಹಳ್ಳಿ ಗ್ರಾಮ ಪಂಚಾಯತಿಯ ರಸ್ತೆ ನಿರ್ಮಾಣ ಕಾಮಗಾರಿ ಕಡತಗಳನ್ನು ತರೆಸಿದ್ದರು. ಸದರಿ ಪಿ.ಡಿ.ಓ ಮಲ್ಲಪ್ಪ (ಆರೋಪಿ ನಂ.3) ಇವರು ಮೇಲೆ ಹೇಳಿದ ಎರಡು ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳು ತಂದು ನಮ್ಮ ಸಮಕ್ಷಮ ಚಾ.ಸಾ-37 ಅವರಿಗೆ ಕೊಟ್ಟಿರುತ್ತಾರೆ.

ಕೂಲಿ ಕಾರ್ಮಿಕರ ಖಾತೆಗೆ ಜಮೆ ಮಾಡಿದ ಬಗ್ಗೆ ಎಸ್.ಬಿ ಖಾತೆಯ ವಿವರದ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವು ಒಂದು ಕಡತದಲ್ಲಿ 15 ಪುಟಗಳು ಇದ್ದು, ಅವುಗಳನ್ನು ನಿ.ಪಿ-26 ಎಂದು ಗುರುತಿಸಲಾಯಿತು. ಹಾಗೂ ಇನ್ನೊಂದು ಕೂಲಿ ಕಾರ್ಮಿಕರ ಖಾತೆಯ ವಿವರಣೆಯ 19 ಪುಟಗಳ ಕಡತವನ್ನು ನಿ.ಪಿ-27 ಎಂದು ಗುರುತಿಸಲಾಯಿತು.

ಗಾಣದಾಳ ಗ್ರಾಮದ ಪ್ರೌಢ ಶಾಲೆಯ ಆಟದ ಮೈದಾನದ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ 33 ಪುಟಗಳ ದಾಖಲೆಯನ್ನು ನಿ.ಪಿ-28 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-28(ಎ) ಎಂದು ಮತ್ತು ಅದರಲ್ಲಿರುವ ಚಾ.ಸಾ-9 ರವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿ.ಪಿ-28(ಬಿ) ಎಂದು ಗುರುತಿಸಲಾಯಿತು.

ಜಾಲಹಳ್ಳಿ ರಸ್ತೆಯಿಂದ ಅಮರೇಗೌಡರ ಹೊಲದವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ 80 ಪುಟಗಳ ದಾಖಲೆಗಳನ್ನು ಒಟ್ಟಾರೆ ನಿ.ಪಿ-29 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-29(ಎ) ಎಂದು ಮತ್ತು ಅದರಲ್ಲಿರುವ ಚಾ.ಸಾ-9 ರವರ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿ.ಪಿ-29(ಬಿ) ಎಂದು ಗುರುತಿಸಲಾಯಿತು.

ನಿ.ಪಿ-26 ರಿಂದ 29 ಕಡತಗಳನ್ನು ನಮ್ಮ ಸಮಕ್ಷಮ ಚಾಸಾ-37 ರವರು ಪರಿಶೀಲಿಸಿದ ನೋಡಿದಾಗ ಸದರಿ ಮೇಲೆ ಹೇಳಿದ ಕಾಮಗಾರಿಯಲ್ಲಿ ತೊಡಗಿಸಿಕೊಂಡ ಕಾರ್ಮಿಕರ ಖಾತೆಗೆ ನಿಗದಿಪಡಿಸಿದ ಕೂಲಿ ಹಣಕ್ಕಿಂತ ಕಡಿಮೆಯಾಗಿ ಜಮೆ ಆಗಿದ್ದು, ಕೆಲವೊಂದು ಕಾರ್ಮಿಕರ ಖಾತೆಗಳಲ್ಲಿ ನಿಗದಿಪಡಿಸಿದ ಕೂಲಿಗಿಂತ ಹೆಚ್ಚಿನ ಕೂಲಿ ಜಮೆ ಆಗಿರುತ್ತದೆ ಎಂದು ಹೇಳಿದರು. ನಿ.ಪಿ-26 ರಿಂದ 29 ಕಡತಗಳನ್ನು ಆರೋಪಿ ನಂ.3 ತಯಾರು ಮಾಡಿದರು, ತದನಂತರ ಆರೋಪಿ ನಂ.4 ರವರು ಅನುಮೋದನೆ ಮಾಡಿದರು ಮತ್ತು ನಿ.ಪಿ-26 ರಿಂದ 29 ಕಡತಗಳಿಗೆ ಆರೋಪಿ ನಂ.6 ಸಹಿ ಹಾಕಿರುತ್ತಾರೆ ಎಂದು ಹೇಳಿದರು. ನಂತರ ಅದೇ ದಿನ ಸಾಯಂಕಾಲ ಪಂಚನಾಮೆಯನ್ನು ಲೋಕಾಯುಕ್ತ ಪೋಲಿಸರು ತಯಾರು ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿ.ಪಿ-30 ಎಂದು, ಸಾಕ್ಷಿ ಸಹಿಗಳನ್ನು ನಿ.ಪಿ-30(ಎ) ರಿಂದ (ಹೆಚ್) ಎಂದು ಗುರುತಿಸಲಾಯಿತು. ನಿ.ಪಿ-30 ಕ್ಕೆ ಇನ್ನೊಬ್ಬ ಪಂಚ ಚಾ.ಸಾ-9 ಇವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ-30(ಐ) ರಿಂದ 30(ಪಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಅನುಮತಿಸಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.